# IN THE COURT OF THE ADDL. SENIOR CIVIL JUDGE & JMFC., GUBBI

# OS - 346/2024

Witness recalled and duly sworn on : 02.02.2026.

Further cross Examination: by Counsel for Defendants :

ಸರ್ವೆ ನಂ.26/1 ರ 14 ಎಕರೆ 4 ಗುಂಟೆ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ.26/1 ರಲ್ಲಿ ನಾಗಪ್ಪ ರವರು ಅವರ ಹೆಂಡತಿ ತಿಮ್ಮಕ್ಕ, ಮಗಳು ವರಲಕ್ಷ್ಮೀ ಮತುತ ಮೊಮ್ಮಗ ಬಾಲಕೃಷ್ಣ ರವರಿಗೆ ನೊಂದಾಯಿತ ಮರಣ ಶಾಸನ ಆಗಿದೆ ಎಂದರೆ ಸರಿ. ಸರ್ವೆ ನಂ.26/1 ರ 14 ಎಕರೆ 4 ಗುಂಟೆ ತಿಮ್ಮಕ್ಕ, ವರಲಕ್ಷ್ಮೀ, ಬಾಲಕೃಷ್ಣ ರವರ ಹೆಸರಿಗೆ ಜಂಟಿಯಾಗಿ ಪಹಣಿ ಬರುತ್ತಿದೆ ಎಂದರೆ ಸರಿ. ಸರ್ವೆ ನಂ.26/1 ರಲ್ಲಿ 2 ಎಕರೆ ಕರಾಬು ಬಿಟ್ಟು 12 ಎಕರೆ 4 ಗುಂಟೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ವಾದಿಯ ಹೆಂಡತಿಯ 18 ಎಕರೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ.

ಪ್ರಶ್ನೆ : ಸರ್ವೆ ನಂ.3/3 ರಲ್ಲಿ 6 ಎಕರೆ ಸರ್ವೆ ನಂ.3/5 ರಲ್ಲಿ 1 ಎಕರೆ ವಾದಿಯ ಹೆಸರಿಗೆ, ಸರ್ವೆ ನಂ.3/2 ರಲ್ಲಿ ವಾದಿಯ ಹೆಂಡತಿಯ ಹೆಸರಿಗೆ 6 ಎಕರೆ 10 ಗುಂಟೆ ಒಟ್ಟು 18 ಎಕರೆ ಆಗುತ್ತದೆ, ಅದೇ ರೀತಿ ವಾದಿಗಳ ಬೇನಾಮಿ ಸುಮಾರು 100 ಎಕರೆ ಇದೆ?

There is no pleading in the written statement of the defendants to that effect. Hence, the said question is irrelevant.

ಸರ್ವೆ ನಂ.26/1 ರ 14 ಎಕರೆ 4 ಗುಂಟೆ ಮಾವು ಇರುತ್ತದೆ. ಬೇರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತು ನೋಡಿಲ್ಲ ಮತ್ತು ಅದರ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ಏನೂ ವ್ಯಾಪಾರ ಮಾಡುತ್ತಾರೆಂದು ನನಗೆ ಗೊತ್ತಿಲ್ಲ.

ಕರಾರು ಪತ್ರದಲ್ಲಿ ಹನುಮಂತರಾಯಪ್ಪ, ಬಾಲಕೃಷ್ಣ, ತಿಪ್ಪಮ್ಮ, ವರಲಕ್ಷ್ಮೀ, ಯೋಗಿಶ್, ಆದಿತ್ಯ ರವರ ಸಹಿ ಇದೆ. ಅದರಲ್ಲಿ ಇರುವ ಹಿಂಬರಹವನ್ನು ನಾನು ಬರೆದಿದ್ದೇನೆ. ಸದರಿ

ಹಿಂಬರಹದಲ್ಲಿ ಹನುಮಂತರಾಯಪ್ಪನವರ ಸಹಿ ಇಲ್ಲ ಎಂದರೆ ಕರಾರು ಪತ್ರ ಆಗುವ ದಿನದಂದು ಬಾಲಕೃಷ್ಣ ಮತ್ತು ಯೋಗಿಶ್ ಮತ್ತು ಇತರರು ಬಂದರೆ ಒಪ್ಪಿಗೆ ಇದೆ ಎಂದು ಹನುಮಂತರಾಯಪ್ಪನವರು ತಿಳಿಸಿದ್ದರು. 2 ನೇ ಹಿಂಬರಹದಲ್ಲಿ ಬಾಲಕೃಷ್ಣ ಮತ್ತು ಯೋಗಿಶ್ ರವರ ಸಹಿ ಇದೆ. ಉಳಿದವರ ಸಹಿ ಇಲ್ಲದೆ ಇದ್ದ ಕಾರಣ ಹಿಂಬರಹಗಳನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ಉಳಿದ ವ್ಯಕ್ತಿಗಳು ಬಾಲಕೃಷ್ಣ ಮತ್ತು ಯೋಗಿಶ್ ರವರಿಗೆ ಒಪ್ಪಿಗೆ ಕೊಟ್ಟಿದ್ದ ಕಾರಣ ಬೇರೆಯವರ ಸಹಿ ಹಿಂಬರದಲ್ಲಿ ಇರುವುದಿಲ್ಲ. ಕರಾರು ಪತ್ರದ ಹಿಂಬರಹದ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಅವರ ಹೆಸರುಗಳು ಸಹ ವ್ಯತ್ಯಾಸ ಇವೆ ಎಂದರೆ ಸರಿಯಲ್ಲ. ಆದ ಕಾರಣ ಕರಾರು ಪತ್ರ ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ. ಕರಾರು ಪತ್ರದ ಮೊದಲನೇ ಪುಟ ಮತ್ತು ಇತರೆ ಪುಟಗಳ ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಕರಾರು ಪತ್ರದ 2 ಮತ್ತು 3 ನೇ ಪುಟದ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಷಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಇರಲಿಲ್ಲ ಮತ್ತು ಕರಾರು ಪತ್ರ ಸುಳ್ಳು ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಈ ಜಮೀನು ಬಿಟ್ಟು ಬೇರೆ ಯಾವುದೇ ಜಮೀನು ಇಲ್ಲ ಮತ್ತು ಅವರಿಗೆ ಬೇರೆ ಕೆಲಸ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ವಾದಿಗೆ ಮೊದಲಿನಿಂದಲೂ ಪರಿಚಯ ಇರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಾನು ಇರಲಿಲ್ಲ ಮತ್ತು ವಿಚಾರಗಳು ನನಗೆ ಗೊತ್ತಿಲ್ಲ ಪರಿಚಯ ಇರುವ ಕಾರಣ ಸಹಿ ಮಾಡಿದ್ದೇನೆಂದರೆ ಸರಿಯಲ್ಲ.

**<u>Re examination – Nil.</u>**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi